# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 843 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : 16.12.2024 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಉತ್ತರ ಕನ್ನಡ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ: |
| ಆ | ಕಾರವಾರ ವಿಜ್ಞಾನಗಳ ಸಂಸ್ಥೆಯ (ಕೀಮ್ಸ್) 11 ತಾಲ್ಲೂಕು ಆಸ್ಪತ್ರೆಗಳಲ್ಲಿ 104 ತಜ್ಞ ವೈದ್ಯರ ಪೈಕಿ ಕೇವಲ 68 ವೈದ್ಯರು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಅನಸ್ತೇಶಿಯಾ, ಮೂಳೆ ತಜ್ಞರು, ಮಕ್ಕಳ ತಜ್ಞರು, ಚರ್ಮರೋಗ ತಜ್ಞರು ಸೇರಿದಂತೆ 36 ತಜ್ಞ ವೈದ್ಯರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಕ್ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಮಂಜೂರಾದ, ಕಾರ್ಯನಿರತ ಮತ್ತು ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತಿದೆ. (see table below) |

| ಕ್ರ ಸಂ | ವೃಂದ | ಸರ್ಕಾರಿ ನೌಕರರ ಸಂಖ್ಯೆ | | |
|---|---|---|---|---|
| | ಹುದ್ದೆ | ಮಂಜೂರು | ಕಾರ್ಯ ನಿರತ | ಖಾಲಿ |
| ಅ) | ಕ್ರಿಮ್ಸ್ ಬೋಧಕ ಹುದ್ದೆಗಳು | | | |
| | ಗ್ರೂಫ್ 'ಎ' | 128 | 94 | 34 |
| ಆ) | ಕ್ರಿಮ್ಸ್ ಬೋಧಕೇತರ ಹುದ್ದೆಗಳು | | | |
| | ಗ್ರೂಪ್ "ಎ" | 06 | 04 | 02 |
| | ಗ್ರೂಪ್ 'ಬಿ' | 01 | 00 | 01 |
| | ಗ್ರೂಪ್ 'ಸಿ' | 180 | 26 | 154 |
| | ಗ್ರೂಪ್ 'ಡಿ' | 150 | 0 | 150 |
| | ಒಟ್ಟು | 465 | 124 | 341 |
| | ಕ್ರಿಮ್ಸ್ ಬೋಧಕ ಆಸ್ಪತ್ರೆಯ ಆಕುಕ ಹುದ್ದೆಗಳು | | | |
| | ಗ್ರೂಪ್ 'ಎ' | 26 | 10 | 16 |
| | ಗ್ರೂಪ್ 'ಬಿ' | 06 | 01 | 05 |
| | ಗ್ರೂಪ್ 'ಸಿ' | 145 | 45 | 100 |
| | ಗ್ರೂಪ್ 'ಡಿ' | 89 | 08 | 81 |
| | ಒಟ್ಟು | 266 | 64 | 202 |

--2

| | | |
|---|---|---|
| ಇ | ಬಂದಿದ್ದಲ್ಲಿ, ಸರ್ಕಾರವು ಕಾರವಾರ ಜಿಲ್ಲೆಯಲ್ಲಿರುವ ಖಾಲಿ ತಜ್ಞ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಳ್ಳುವ ಕ್ರಮವೇನು; ಸರ್ಕಾರದ ಸ್ಪಷ್ಟ ನಿಲುವೇನು? | ಕಾರವಾರ ಜಿಲ್ಲೆಯಲ್ಲಿ ಖಾಲಿಯಿರುವ ತಜ್ಞ ವೈದ್ಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ಪ್ರತ್ಯೇಕವಾಗಿ ನೇಮಕಾತಿಯನ್ನು ಕೈಗೊಳ್ಳುವುದಿಲ್ಲ. ಬದಲಿಗೆ ರಾಜ್ಯದಲ್ಲಿ ಖಾಲಿ ಇರುವ ತಜ್ಞರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹಾಗೂ ದಂತ ಆರೋಗ್ಯ ಅಧಿಕಾರಿಗಳನ್ನು ನೇಮಕ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:<br>1. ಪತ್ರ ಸಂಖ್ಯೆ: ಆಕುಕ 453 ಎಚ್ಎಸ್ಎಚ್ 2022, ದಿನಾಂಕ:13.12.2022 ಮತ್ತು ಆದೇಶ ಸಂಖ್ಯೆ:ಆಕುಕ 619 ಎಚ್ಎಸ್ಎಚ್ 2022, ದಿನಾಂಕ:17.01.2024ರಲ್ಲಿ, ಆಕುಕ ಇಲಾಖೆಯಲ್ಲಿ ಖಾಲಿ ಇರುವ ತಜ್ಞ ವೈದ್ಯರನ್ನು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಕೆಲವು ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br>2. ಇಲಾಖೆಯ ಮುಖಾಂತರ ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ತಜ್ಞ ವೈದ್ಯರನ್ನು ತಜ್ಞತೆ ಹುದ್ದೆಗೆ ನೇಮಿಸಲಾಗುತ್ತಿದೆ.<br>3. ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಒಂದು ವರ್ಷದ ಕಡ್ಡಾಯ ಸೇವೆಗಾಗಿ ಬರುವ ವೈದ್ಯ ಅಭ್ಯರ್ಥಿ/ತಜ್ಞ ವೈದ್ಯ ಅಭ್ಯರ್ಥಿಗಳನ್ನು ವೈದ್ಯರ/ತಜ್ಞರ ಹುದ್ದೆಗಳಿಗೆ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.<br>ಇಲಾಖೆಯಲ್ಲಿ ಕಾಲಕಾಲಕ್ಕೆ ಖಾಲಿಯಾಗುವ ಹುದ್ದೆಗಳನ್ನು ನೇರ ನೇಮಕಾತಿ, ಗುತ್ತಿಗೆ, ಮುಂಬಡ್ತಿ, ವರ್ಗಾವಣೆ ವಿಧಾನಗಳಡಿ ನಿಯಮಾನುಸಾರ ಕಾಲಕಾಲಕ್ಕೆ ಭರ್ತಿ ಮಾಡುವ ಮೂಲಕ ಹುದ್ದೆಗಳ ಕೊರತೆಯನ್ನು ನೀಗಿಸಲು ಕ್ರಮ ವಹಿಸಲಾಗುತ್ತಿದೆ. |

**ಆಕುಕ 83 ಎಚ್ಎಸ್ಡಿ 2024**

**(ದಿನೇಶ್ ಗುಂಡೂರಾವ್)**
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)